


ಎಡದಿಂದ ಬಲಕ್ಕೆ :

1. ವೇಷದಿಂದಲೇ ತಿಳಿಯುತ್ತದೆ, ಅವನು ನೀಡುವುದು 'ಕಾಡಿನ ಮದ್ದು' 4
3. ಕಂದಮೂಲಗಳ ನಡುವೆ ಒಂದು ನೈದಿಲೆಯ ಬಳ್ಳಿ ಕೂಡ ಇದೆ 3
4. ಎಲ್ಲ ಧಾನ್ಯಗಳ ದರ ನಿಗದಿ ಕುರಿತ ತೀರ್ಮಾನ ಏನು? 3
6. 'ದಮಯಂತಿಯ ಗಂಡ'ನಂತೆ ಅತ್ಯಂತ ರುಚಿಕರವಾದ ಅಡುಗೆ 4
7. ನಿಮ್ಮೂರಿನ ದುಷ್ಟರನ್ನೆಲ್ಲ ನಿಗ್ರಹಿಸಿದ್ದು ಆಯಿತೇ? 4
9. ಒಂದೇ ಹನಿ ಕೈ ಸೇರಿದರೂ ಆ ವಸ್ತು ಅಪಾಯ ತರುವಂತಹದು 4
11. ದಾಡಿಯನ್ನು ಸರಿಮಾಡುವ ಕೆಲಸ ಮಧ್ಯ ಮಾರ್ಗದಲ್ಲಿದೆ 4
13. ದೇವತೆಗಳ ಪತಿಯಾದ ಇಂದ್ರನೇ ಸ್ವರ್ಗದ ಒಡೆಯನೂ ಹೌದೇ? 4
15. ಎಲ್ಲ ಕಾರ್ಯಕ್ರಮಗಳನ್ನೂ ರೂಪಿಸುವವ ಆ ಕಚೇರಿಯ ಗುಮಾಸ್ತ 4
17. ಜೋರಾಯಿತು ಚಳಿ; ಅದಕ್ಕೇ ಈ ಬೆಚ್ಚನ್ನ ಹೊದಿಕೆ 3
18. ಸಹವಾಸ ಎಂಥಹುದೆಂದು ಎತ್ತಿ ತೋರುವಂತಿದೆ ಆತನ ಉಡುಪು 3
19. ಸಾಧಾರಣ ಜನರ ಜೀವನದಲ್ಲಿ ಅಭಿವೃದ್ಧಿ ಹೇಗೆ ? 4

ಮೇಲಿಂದ ಕೆಳಕ್ಕೆ:

1. ಆಕೆಯ ಮನದ ವೇದನೆಯನ್ನು ಮುಖವೇ ತಿಳಿಸುತ್ತಿದೆ 3
2. ಕ್ರೋಧವನ್ನು ನಿಗ್ರಹಿಸಿದವ ಈಗ ಭಾರೀ ಹಣವಂತ 3
3. ಕಾಶಿಯಲ್ಲಿ ಗಂಗಾಸ್ನಾನ ಮಾಡಿಬಂದವರ ಕ್ಷೇಮ ಹೇಗೆ? 3
5. ಜ್ವರ ನಿವಾರಣೆಯಾಗುವ ವೇಳೆಗೆ ರಾತ್ರಿಯಾಗಿತ್ತು 3
7. ಪ್ರತಿ ಶನಿವಾರವೂ ಆತನ ಅಭ್ಯಾಸ ಇಂಥ ಉಪವಾಸ 4
8. ವರಿಸಿ ಬಂದವನ ಪಾಲಿಗೆ ಸಿಕ್ಕಿದ್ದು 'ಹೊಸ ಐಶ್ವರ್ಯ' 4
9. ದಿನವೂ ಭಾರೀ ಹದ್ದುಬಸ್ತಿನಲ್ಲಿ ಇರುತ್ತದೆ ರಸ್ತೆಯ ಪಾರ್ಶ್ವ 4
10. ತರುಣರನ್ನು ಸರಿದಾರಿಯಲ್ಲಿಡಲು ಒಂದು ಯುದ್ಧ ತಂತ್ರ 4
12. ದೂರ್ತ ಜನರ ಕಪಟಕ್ಕೆ ಬಲಿಯಾದವನು ಒಬ್ಬ ದಾನಿ 3
14. ಯಾರಿಗೂ ವಂಚನೆ ಮಾಡುವುದಿಲ್ಲ ಎಂಬುದು ಅವನ ಪ್ರತಿಜ್ಞೆ 3
15. ಸಾಯಂಕಾಲದವರೆಗೂ ಎಲ್ಲರನ್ನೂ ಅಲ್ಲೇ ಕೂರಿಸಿ 'ಬಿಸಿ ಮಾಡು' 3
16. ನಾವೆಣಿಸಿದಂತಲ್ಲ ; ಇದೊಂದು ಪ್ರಸಿದ್ಧ ಸಿರಿ ಧಾನ್ಯ 3

---

## 01—07—2021 ಉತ್ತರಗಳು

ಎಡದಿಂದ ಬಲಕ್ಕೆ:

1. ಅಸಂತುಷ್ಟ 3. ಗುರಾಣಿ 7. ಭೀತಜನ 8. ಪ್ರಬಂಧ 9. ಕಡ 12. ಯತಿ 14. ಬೆವರು 15. ರುಜುವಾತು 17. ಹರಿಣಿ 18. ಅಧಿಕಾರ

ಮೇಲಿಂದ ಕೆಳಕ್ಕೆ:

1. ಅಣಿ 2. ತುಳಿತ 4. ರಾಯಧನ 5. ಜನಕ 6. ಸಂಪ್ರದಾಯ 10. ಡಮರುಗ 11. ಗೂಬೆಮರಿ 13. ತಿರುಕ 16. ವಾರಿಧಿ 17. ಹರ

ಪ್ರಶ್ನಾಂಕಣ

# ನೀಲಿ ಇಂಗಾಲ ಎಂದರೇನು?

ಪೃಥ್ವಿಯ ಸಾಗರಾವಾರದಲ್ಲಿ ಶೇಖರಗೊಂಡಿರುವ ಇಂಗಾಲವೇ ನೀಲಿ ಇಂಗಾಲ' (Blue Carbon). ಕಡಲಿನ ಸಾಮಾನ್ಯ ದೃಗ್ಗೋಚರ ವರ್ಣ ನಿರಭ್ರ ಆಗಸದಂತೆ ತಿಳಿ ನೀಲಿಯಾದ್ದರಿಂದ ಈ ಹೆಸರು.

ನಿಮಗೇ ತಿಳಿದಂತೆ ನಿಸರ್ಗದ ಒಂದು ಮೂಲ ವಸ್ತುವಾಗಿರುವ ಇಂಗಾಲ ಧರೆಯಲ್ಲಿ ಧಾರಾಳ ಪ್ರಮಾಣದಲ್ಲಿದೆ. ವಜ್ರ, ಗ್ರಾಫೈಟ್ ಇತ್ಯಾದಿಗಳಂತೆ ಪರಿಶುದ್ಧ ರೂಪದಲ್ಲೂ, ಇಂಗಾಲದ ಡೈ ಆಕ್ಸೈಡ್, ಇಂಗಾಲದ ಮಾನಾಕ್ಸೈಡ್ ಇತ್ಯಾದಿ ಹೇರಳ ಸಂಯುಕ್ತಗಳ ರೂಪದಲ್ಲೂ ಪೃಥ್ವಿಯ ಒಡಲಲ್ಲಿ, ನೆಲ ಕಡಲು ವಾಯುಮಂಡಲಗಳಲ್ಲಿ ಬೆರೆತಿದೆ. ಮನುಷ್ಯರೂ ಸೇರಿದಂತೆ ಸರ್ವ ವಿಧ ಪ್ರಾಣಿಗಳಲ್ಲೂ, ಸಸ್ಯಗಳಲ್ಲೂ ಭಾರೀ ಪ್ರಮಾಣದಲ್ಲಿದೆ (ಮಾನವ ಶರೀರದ ಒಟ್ಟು ದ್ರವ್ಯದಲ್ಲಿ ಇಂಗಾಲದ್ದು ಶೇಕಡ 12 ಭಾಗ). ಭೂಮಿಯಲ್ಲಿರುವ ಒಟ್ಟು ಇಂಗಾಲ 1.85 ಶತಕೋಟಿ ಶತಕೋಟಿ ಟನ್ (1.85 ರ ಮುಂದೆ 18 ಸೊನ್ನೆಗಳನ್ನು ಬರೆದರೆ ಆ ಸಂಖ್ಯೆ ಬರುತ್ತದೆ) ಇದರ ಶೇಕಡ 99 ಭಾಗ ಧರೆಯ ಅಂತರಾಳದಲ್ಲಿದೆ. ಭೂಮಿಯ ನೆಲ, ಕಡಲು, ವಾಯುಮಂಡಲ ಮತ್ತು ಸಕಲ ಜೀವಿಗಳಲ್ಲಿ 43,500 ಶತಕೋಟಿ ಟನ್ ಇಂಗಾಲ ಇದೆ! ಇದರ ಶೇಕಡ 93 ಭಾಗ ನೀಲಿ ಇಂಗಾಲ ಆಗಿದೆ!

ನೀಲಿ ಇಂಗಾಲ ಪ್ರಧಾನವಾಗಿ ಸಾಗರ ತಳದ ನೆಲದಲ್ಲಿ, ಕಡಲಿನ ಸಸ್ಯ ರಾಶಿಯಲ್ಲಿ (ಎಂದರೆ ಫೈಟೋ ಪ್ಲಾಂಕ್ಟನ್, ಕಡಲ ಹುಲ್ಲು, ಕಡಲ ಕಳೆ ಇತ್ಯಾದಿ (ಚಿತ್ರದಲ್ಲಿ ಗಮನಿಸಿ), ಕಡಲಂಚಿನ ಜೌಗು ಪ್ರದೇಶಗಳಲ್ಲಿ ಮತ್ತು ಸಾಗರ ತೀರದ 'ಮ್ಯಾಂಗ್ರೂವ್ ಅಡವಿ'ಗಳಲ್ಲಿ ಸಂಗ್ರಹವಾಗಿದೆ. ಈಗಿನ ಮಾನವರ ಕೈಗಾರಿಕಾ ಚಟುವಟಿಕೆಗಳಿಂದ (ವಿಶೇಷವಾಗಿ ತೈಲ, ಅನಿಲ, ಕಲ್ಲಿದ್ದಿಲುಗಳಂತಹ ಪಳೆಯುಳಿಕೆ ಇಂಧನಗಳ ಉರಿಸುವಿಕೆಯಿಂದ) ನಿರಂತರ ಬಿಡುಗಡೆಗೊಳ್ಳುತ್ತಿರುವ ಇಂಗಾಲದ ಬಹುಪಾಲನ್ನು ಕಡಲಿನಾವಾರ ಹೀರಿಕೊಳ್ಳುತ್ತದೆ; ಉಳಿದದ್ದು ವಾಯುಮಂಡಲವನ್ನು ಸೇರುತ್ತಿದೆ.

ವಿಶೇಷ ಏನೆಂದರೆ, ಕಡಲಿನಲ್ಲಿ ಮತ್ತು ಕಡಲನ್ನಾಶ್ರಯಿಸಿರುವ ಜೀವಜಾಲದಲ್ಲಿ ಶೇಖರವಾಗುವ 'ನೀಲಿ ಇಂಗಾಲ'ದಿಂದ ಪೃಥ್ವಿಯ ಪರಿಸರಕ್ಕೆ ಯಾವ ಹಾನಿಯೂ ಆಗುವುದಿಲ್ಲ. ಆದರೆ ವಾಯುಮಂಡಲಕ್ಕೆ ಬೆರೆಯುವ ಇಂಗಾಲ ಭೂ ತಾಪವನ್ನು ಹೆಚ್ಚಿಸುತ್ತದೆ ; ಭೂಮಿಗೆ 'ಜ್ವರ' ಬರಿಸುತ್ತದೆ; ಇಡೀ ಧರೆಯನ್ನೇ ವಿನಾಶದತ್ತ ನಡೆಸುತ್ತದೆ.




ಹೀಗಾಗುತ್ತಿರುವುದೇ ಪ್ರಸ್ತುತದ ಸ್ಥಿತಿ. ಏಕೆಂದರೆ, ಸಾಗರ ಜೀವಜಾಲ ಮತ್ತು ಸಾಗರದಂಚಿನ ಜೀವಾವಾರಗಳ ಮೇಲೆ ಮನುಷ್ಯರ ದುರಾಕ್ರಮಣ ನಿರಂತರ ಸಾಗಿದೆ. ಕಡಲಂಚಿನ ಜೌಗು ಪ್ರದೇಶಗಳನ್ನು ಮತ್ತು ಮ್ಯಾಂಗ್ರೂವ್ ವೃಕ್ಷಗಳ ಅರಣ್ಯಗಳನ್ನು ವಾಣಿಜ್ಯೋದ್ಯಮಗಳ ನಿರ್ಮಾಣಗಳಿಗಾಗಿ ನಿರ್ನಾಮಗೊಳಿಸಲಾಗುತ್ತಿದೆ. ಹಾಗಾಗಿ ಪಾರಾವಾರದ ನೈಸರ್ಗಿಕ ನೀಲಿ ಇಂಗಾಲ ಸಂಗ್ರಹಣಾ ಸಾಮರ್ಥ್ಯ ಕುಗ್ಗುತ್ತಿದೆ; ಒಟ್ಟಾರೆ ಭೂ ಸ್ವಾಸ್ಥ್ಯವೇ ಹದಗೆಡುತ್ತಿದೆ!

■ ಎನ್. ವಾಸುದೇವ್